ನೋಡುತ್ತ ಕೀರ್ತನೆಯ ರಿದಮ್ಮಿಗೆ, ಖೋಲಿನ ಜಪ್ಪಿಗೆ, ತಾಳದ ಕಿಟರಣಕ್ಕೆ ಸರಿಯಾದ ಆವೇಶದಲ್ಲಿ ಸಿಂಗ್ ಸಾಹೇಬರು ದಮ್ಮುಕಟ್ಟಿಕೊಂಡು ತೂಗತೊಡಗಿದ್ದನ್ನು ಯೂರಿ ನೋಡುತ್ತ ನಿಂತಳು.

ಯೂರಿಗೆ ಇದೆಲ್ಲ ಹೊಸತೇನಲ್ಲ. ಸಾವಿರದ ಒಂಬೈನೂರಾ ಎಂಬತ್ತಾರರಲ್ಲಿ ಸಿಂಗ್ ಸಾಹೇಬರು ತಾಂಜಾನಿಯಾದಿಂದ ಅಮೇರಿಕಕ್ಕೆ ಬಂದು ಮನೆ ಕಟ್ಟುವ ಮತ್ತು ಮಾರುವ ಕಾಯಕವನ್ನು ಶುರು ಮಾಡಿದಾಗಿನಿಂದ ಯೂರಿ ಅವರ ಪರ್ಸನಲ್ ಅಸಿಸ್ಟೆಂಟಾಗಿ ಸಿಂಗ್ ಸಾಹೇಬರ ಸಿಂಗ್ ಹೋಮ್ಸ್ ಎಂಟರ್‌ಪ್ರೈಸಸ್‌ನ ಭಾಗವಾಗಿ ಹೋಗಿದ್ದಳು. ಅಂಥದ್ದೊಂದು ಕಮರ್ಷಿಯಲ್ ಕಂಪನಿಯ ಪ್ರಗತಿಗೆ ಅವಳ ಪಾತ್ರವು ಎಷ್ಟಿತ್ತೋ ಅದಕ್ಕಿಂತ ಹೆಚ್ಚಾಗಿ ಯೂರಿ ಸಿಂಗ್ ಸಾಹೇಬರ ಕುಟುಂಬದ ಸದಸ್ಯೆಯೂ ಆಗಿಬಿಟ್ಟಿದ್ದಳು. ಎಲ್ಲಿಯವರೆಗೆಂದರೆ ಸಿಂಗ್ ಸಾಹೇಬರ ಮೊಮ್ಮಗಳ ಮದುವೆಯಲ್ಲಿ ಯೂರಿ ವಧುವಿನ ಅತ್ತೆಯ ಸ್ಥಾನವನ್ನು ವಹಿಸಿಕೊಂಡು ಹವಾಯಿ ದ್ವೀಪದಲ್ಲಿ ನಡೆದ ಡೆಸ್ಟಿನೇಷನ್ ವೆಡ್ಡಿಂಗಿನಲ್ಲಿ ಖುದ್ದು ಸೀರೆ ಉಟ್ಟು ಹವಾ ಹಚ್ಚಿದ ಪರಿಗೆ ಸಿಂಗ್ ಸಾಹೇಬರ ಮನೆಯ ಹೆಣ್ಣುಸಿಂಹಗಳೂ, ಅತ್ತ ವರನ ಕಡೆಯ ಮೆಹ್ತಾ ಮೇಮ್‌ಸಾಬ್‌ಗಳೆಲ್ಲ ನಿಬ್ಬೆರಗಾಗಿ ನಿಂತಿದ್ದರು.

ಆ ಮದುವೆಯು ಮುಗಿದು ಆರು ವರ್ಷ ಕಳೆದು ಸಿಂಗ್ ಸಾಹೇಬರ ಮೊಮ್ಮಗಳು ಉತ್ತರಾ ಮತ್ತವಳ ಗಂಡ ಸ್ಟಾರ್ ಬಕ್ಸಿನಲ್ಲಿ ಕಾಫಿ ಆರ್ಡರ್ ಮಾಡುವಾಗ ಆದ ಒಂದು ಅವಘಡದಿಂದ ಮದುವೆಯಾದ ನಾಲ್ಕೇ ತಿಂಗಳಿಗೆ ಡೈವೋರ್ಸ್ ಪಡೆದುಕೊಂಡರೂ ನಾರ್ಥ್ ಕೆರೋಲಿನಾ ರಾಜ್ಯದ ಶ್ರೀಮಂತ ಭಾರತೀಯ ಬ್ಯುಸಿನೆಸ್ಸುಮನ್ನುಗಳ ಮನೆಗಳಲ್ಲಿ ಡೆಸ್ಟಿನೇಶನ್ ವೆಡ್ಡಿಂಗಿನ ವಿಚಾರವಾಗಿ ಯಾವುದೇ ಮಾತು ಬಂದರೂ ಹವಾಯಿಯಲ್ಲಿ ನಡೆದ ಸಿಂಗ್ ಸಾಹೇಬರ ಮೊಮ್ಮಗಳ ಮದುವೆ ಮತ್ತು ಸಿಂಗ್ ಸಾಹೇಬರ ಪರ್ಸನಲ್ ಅಸಿಸ್ಟೆಂಟ್ ಯೂರಿ ಉಟ್ಟಿದ್ದ ಸೀರೆಯ ಬಗ್ಗೆ ಒಂದಷ್ಟು ಪ್ರತಿಷ್ಠಾತ್ಮಕ ಮಾತುಕತೆಯು ನಡೆಯದೇ ಇರುತ್ತಿರಲಿಲ್ಲ. ಒಟ್ಟಿನಲ್ಲಿ ಈ ಎಲ್ಲದರ ಪ್ರಭಾವವೆಂಬಂತೆ ಸಿಂಗ್ ಸಾಹೇಬರ ಕುಟುಂಬದ ಎಲ್ಲರೂ ಆನಂತರ ಸ್ಟಾರ್ ಬಕ್ಸ್ ಕಾಫಿಯ ರುಚಿಯನ್ನು ಕಂಡಕಂಡಲ್ಲಿ ಬಯ್ಯತೊಡಗಿದರು. ಜೊತೆಗೆ ತಮ್ಮ ಆಫೀಸಿನ ಕಟ್ಟಡದ ಕೆಫೆಟೇರಿಯಾದಲ್ಲಿ ಕೂಡ ಸ್ಟುರದ್ರೂಪಿ ಹುಡುಗರಿಗೆ ಕೆಲಸ ಕೊಡುವುದನ್ನು ನಿಲ್ಲಿಸಿದರು.

'ಸರ್, ಅಯಾಮ್ ಹಿಯರ್'

ಯೂರಿಯನ್ನು ಕೇಳಿದ ಸಿಂಗ್ ಸಾಹೇಬರು,

'ನೋಡಿಲ್ಲಿ ಯೂರಿ, ಈಕೆ ಅದೆಷ್ಟ್ ಚೆನಾಗ್ ಕೀರ್ತನೆ ಮಾಡ್ತಾಳೆ (ಹೆಮ್ಮೆಯ ನಿಟ್ಟುಸಿರೊಂದಿಗೆ). ಇವ್ಳನ್ನ ಕಾಂಟಾಕ್ಟ್ ಮಾಡಿ ಈಕೆ ನಾರ್ಥ್ ಕೆರೊಲಿನಾಗೆ ಎಲೆಕ್ಷನ್ ಪ್ರಚಾರಕ್ಕೆ ಯಾವಾಗ್ ಬರ್ತಾಳೆ ಕೇಳು. ನಮ್ಮನೆಯಲ್ಲೇ ಒಂದು ಕೀರ್ತನ್ ಮೇಳಾ ಆಯೋಜನೆ ಮಾಡೋಣ. ಮತ್ತೆ, (ಸ್ವಲ್ಪ ಸ್ವಲ್ಪವೇ ತಡವರಿಸುತ್ತ) ಅವಳ ಪಾರ್ಟಿಗೆ ಎಷ್ಟು ಡೊನೇಟ್ ಮಾಡ್ಬಹುದು ಅಂತ ವಿಚಾರ ಮಾಡಿ ಅವ್ಳನ್ನ ಕಾಂಟಾಕ್ಟ್ ಮಾಡಿದಾಗ ಅದನ್ನು ಅರ್ಥವಾಗುವಂತೆ ಹೇಳ್ಬಿಡು. (ಈಗ ಸ್ವಲ್ಪ ಆವೇಶದಲ್ಲಿ ಕೀರ್ತನೆಯ ರಿದಮ್ಮಿಗೆ ಸರಿಯಾಗಿ ಮೇಜನ್ನು ತಟ್ಟುತ್ತ) ಅಯಾಮ್ ಲುಕಿಂಗ್ ಫಾರ್ವರ್ಡ್ ಟು ದಿಸ್ ವನ್!'

ಕುತ್ತಿಗೆಯನ್ನು ಸ್ವಲ್ಪವೇ ಬಗ್ಗಿಸಿ ತನ್ನೆರಡು ಹುಬ್ಬುಗಳನ್ನೆತ್ತಿ ಕಣ್ಣ ಕಪ್ಪು ಪಾಪೆಗಳು ಬಿಳಿಯ ಭಾಗದ ಮಧ್ಯದಲ್ಲಿ ಬಂದು ಅಲುಗದೆ ನಿಂತ ಭಂಗಿಯಲ್ಲಿ 'ಯೆಸ್ ಸರ್, ಎನಿ ಥಿಂಗ್ ಎಲ್ಸ್?' ಎಂದು ಮತ್ತೆ ತುಲಸಿಯ ಕೀರ್ತನೆಯಲ್ಲಿ ಕಳೆದು ಹೋದ ಸಿಂಗ್ ಸಾಹೇಬರ ತನ್ಮಯತೆಗೆ ಧಕ್ಕೆ ಬಾರದಂತೆ ಯೂರಿ ಅಲ್ಲಿಂದ ಹೊರನಡೆದಳು.

ಆ ಬೆಳಿಗ್ಗೆ ಸಿಂಗ್ ಸಾಹೇಬರು ಒಂದೊಂದಾಗಿ ಆಫೀಸಿನ ಎಲ್ಲ ವಿಭಾಗದ ಮ್ಯಾನೇಜರುಗಳ ಆಫೀಸಿಗೆ ಹೋಗಿ ಆ ಅಲ್ಲಿದ್ದವರಿಗೆಲ್ಲ ತುಲಸಿಯ ಆ ವಿಡಿಯೊವನ್ನು ತೋರಿಸಿ ಆ ಕೀರ್ತನೆಯಿಂದ ತಮಗಾದ ಆನಂದದ ಬಗ್ಗೆಯೂ ಮತ್ತು ಗಣೇಶ ಭಗವಾನ ಮೂರ್ತಿಗೆ ಸೊಂಡಿಲಿರುವ ಮಹತ್ವದ ಬಗ್ಗೆಯೂ ಬಹಳ ತನ್ಮಯತೆಯಿಂದ ವಿವರಿಸಿದರು. ತಿಂಗಳಿಗೊಮ್ಮೆ ಕಂಪನಿಯ ಗೆಟ್ ಟುಗೆದರ್ ಮೀಟಿಂಗನಲ್ಲಿ ಬಂದು ಕುಳಿತು ಅರ್ಧಕ್ಕೂ ಹೆಚ್ಚು ಮೀಟಿಂಗಿನ ಸಮಯದಲ್ಲಿ ಧ್ಯಾನಸ್ಥರಾಗುತ್ತಿದ್ದ ನಾರ್ಥ್ ಕೆರೋಲಿನಾ ರಾಜ್ಯದ ಅತೀ ಶ್ರೀಮಂತ ಧರ್ಮದರ್ಶಿ ಎಂಡಿಯು ಹೀಗೆ ತಮ್ಮ ಕೋಣೆಗೆ ಅಚಾನಕ್ಕಾಗಿ ಬಂದಾಗ ತಡಬಡಾಯಿಸುತ್ತ ಇದ್ದಕ್ಕಿದ್ದಂತೆ ಉದ್ವಿಗ್ನರಾಗಿ ಎದ್ದು ನಿಂತು ಗೌರವ ಸೂಚಿಸುತ್ತಿದ್ದರು ಆ ಅಮೇರಿಕನ್ ಮ್ಯಾನೇಜರುಗಳು. ಹಾಗೆ ತಮ್ಮ ದೇಶದ ಪ್ರೆಸಿಡೆಂಟ್ ಕ್ಯಾಂಡಿಡೇಟು ಹಾರ್ಮೋನಿಯಮ್ಮು ಹಿಡಿದು ಹಾಡುವುದನ್ನು ಬಾಯ್ಬಿಟ್ಟುಕೊಂಡು ನೋಡುತ್ತ ಕಡೆಗೆ ಎಲಿಫೆಂಟ್ ಗಾಡ್‌ನ ತಲೆಯ ಮಹತ್ವದ ಬಗೆಗಿನ ವಿವರಣೆಯನ್ನು ಕೇಳುವ ಹೊತ್ತಿಗೆ ಬೇಡವೆಂದರೂ ಸರ್ರನೆ ಫ್ಲೈಟ್ ಮೋಡಿಗೆ ಹೋಗಿಬಿಡುತ್ತಿದ್ದರು.

ಸಿಂಗ್ ಸಾಹೇಬರು ಇದೇ ಫೋರ್ಸಿನಲ್ಲಿ ಆ ದಿನ ಮಧ್ಯಾಹ್ನ ತಮ್ಮ ಎಂದಿನ ಸಮಯಕ್ಕಿಂತ ತುಸು ಮುಂಚೆಯೇ ಮನೆಗೆ ಬಂದರು. ಮನೆಯ ಹತ್ತಿರ ಬಂದಂತೆ, ಯಾವಾಗಲೂ ನಲ್ವತ್ತು ಮೈಲಿ ವೇಗಕ್ಕೆ ತಮ್ಮ ಟೆಸ್ಲಾದ ಆಟೋಪೈಲಟ್ಟನ್ನು ಹೊಂದಿಸಿ ಕೈ ಕಟ್ಟಿ ಕೂರುತ್ತಿದ್ದ ತಾನು ಇಂದು ಅರವತ್ತು ಎಪ್ಪತ್ತರಲ್ಲಿ ಓಡಿಸಿಕೊಂಡು ಬಂದದ್ದಕ್ಕೆ ಕಾರಣವೇನಾದರೂ ಇದೆಯೋ ಎಂದು ಆಲೋಚಿಸಲು ತೊಡಗಿದರು ಮತ್ತು ಅಲ್ಬರ್ಟಾ ಆಂಜೆಲಿಕಾಳ ಗಣಿತ ಸೂತ್ರದ ಕೊನೆಯ ಉತ್ತರದಷ್ಟೇ ದೀರ್ಘವಾಗಬಹುದಾದ ಮತ್ತು ಗಹನವಾದ ವಸ್ತುವೊಂದರ ಆಳದಲ್ಲಿ ಹೋಗಿ ಉತ್ತರಕ್ಕಿಂತ ಹತ್ತು ನಿಮಿಷಗಳ ಮೊದಲೇ ಮನೆಯ ಡ್ರೈವ್ ವೇ ಮೇಲೆ ಬಂದು ನಿಂತು ಅವರು ಕಾರಿನಿಂದ ಕೆಳಗೆ ಇಳಿಯುವಾಗ ಎದುರು ಮನೆಯ ಹುಲ್ಲು ಹಾಸನ್ನು ಸಪಾಟು ಮಾಡುತ್ತಿದ್ದ ಒಬ್ಬ ಹುಡುಗ ಅವರ ದೃಷ್ಟಿಗೆ ಬಿದ್ದನು. ಕ್ಷಣಾರ್ಧ ನಿಂತು ಆ ಹುಡುಗನ ಕಾರ್ಯತತ್ಪರತೆಯನ್ನು ಗಮನಿಸುತ್ತ ಆ ಗುಣದ ಬಗ್ಗೆ ಮನಸ್ಸಿನಲ್ಲೇ ಮೆಚ್ಚಿಕೊಂಡರಾದರೂ ಕಳೆದ ವಾರ ತಮ್ಮ ಮನೆಯ ಗಾರ್ಡನಿಂಗ್ ಹುಡುಗರ ಜೊತೆಗಾದ ಕಹೀ ಅನುಭವವು ಅವರಿಗೆ ನೆನಪಾಯಿತು.

ಕಳೆದ ಮಂಗಳವಾರದ ಬೆಳಿಗ್ಗೆ ಆಫೀಸಿಗೆ ಹೊರಡುವ ಮುನ್ನ ಮನೆಯ ಹಿಂಬದಿಯ ಅಂಗಳದಲ್ಲಿದ್ದ ತುಲಸೀ ದೇವಿಗೆ ಎಂದಿನ ರೂಢಿಯಂತೆ ನೀರು ಹಾಕಿ ನಮಸ್ಕರಿಸಲು ಹೋದ ಸಿಂಗ್ ಸಾಹೇಬರಿಗೆ ಅಂಗಳದ ಹಿಂಬದಿಯ ಮನೆಯ ತೋಟದಲ್ಲಿ ಗಾರ್ಡನಿಂಗ್ ಹುಡುಗರು ನುಗ್ಗೇಕಾಯಿಯ ಮರವನ್ನು ಕತ್ತರಿಸುತ್ತಿದ್ದುದು ಕಂಡಿತು. ಎಂಬತ್ತಾರರ ಪರಮಮೈತ್ರ ತಾರೆಯರಂತಿದ್ದ ಅವರ ಎರಡುಕಣ್ಣುಗಳೂ ಈಗ ಕಿರಿದಾಗಿ ವಸ್ತುವನ್ನೂ ಮತ್ತು ಆ ದೃಶ್ಯವನ್ನೂ ನಿರುಕಿಸತೊಡಗಿದವು. ಆ ಪ್ರತ್ಯಕ್ಷದ ಪ್ರಕ್ರಿಯೆಯಲ್ಲಿ ಇಂದ್ರಿಯಾರ್ಥವು ತನ್ನ ಜಾದೂಶಕ್ತಿಯಿಂದ ದೊಡ್ಡದಾಗಿ ಕಾಣಿಸಿಕೊಳ್ಳತೊಡಗಿ ಅವರ ಕಣ್ಣುಗಳು ಮತ್ತಷ್ಟು ಕಿರಿದಾಗಿ ಮನೋಮಂಡಲವನ್ನೂ ಹೊಕ್ಕ ಜಾದೂಜಿಲೇಬಿಯು ರಪರಪನೆ ಗೋಲಾಕಾರದಲ್ಲಿ ಗಿರಗಿಟ್ಟಲೆಯಂತ ತಿರುಗುತ್ತ ಸಿಂಗ್ ಸಾಹೇಬರ ನೆತ್ತಿಯೊಳಗೆ ಕುದಿಯಲು ಶುರುವಾದ ಪರಿಗೆ ಅವರ ಕಾಲುಗಳು ಸಡನ್ನಾಗಿ ಸಡಿಲಗೊಂಡು ಆ ಗಾರ್ಡನರ್ ಹುಡುಗರತ್ತ ಓಡತೊಡಗಿದವು. ಈ ಕೂಡಲೇ ಈ ಹುಡುಗರು ತನ್ನ ಪ್ರೀತಿಯ ನುಗ್ಗೇಕಾಯಿಯ ಮರವನ್ನು ಕಡಿಯುವುದನ್ನು ನಿಲ್ಲಿಸಬೇಕು ಎಂದುಕೊಂಡು ಓಡುತ್ತಿದ್ದ ಸಿಂಗ್ ಸಾಹೇಬರು 'ಸ್ಟಾಪ್ ಇಟ್ ಸ್ಟಾಪ್ ಇಟ್' ಎಂದು ಕೂಗುತ್ತಿದ್ದರು.

ಆ ಹುಡುಗ ಕೈಯಲ್ಲಿ ಹಿಡಿದಿದ್ದ ಚಕ್ರದಂಥ ಎಲೆಕ್ಟ್ರಿಕ್ ಗರಗಸವು ದಯಾದಾಕ್ಷಿಣ್ಯದ



## ನಾಲಿಗೆ

ಹೇಗೆ ಬೇಕಾದರೂ
ಯಾವಾಗ ಬೇಕಾದರೂ
ಎಲ್ಲಿಯಾದರೂ ಸರಿ
ಉರುಳುವ ಹೊರಳುವ
ಸ್ವಾತಂತ್ರ್ಯ ಇರುವ ಏಕೈಕ
ಮನುಷ್ಯ ಜೀವಾಂಗ

—ವಿ. ಸುಬ್ರಹ್ಮಣ್ಯ ಭಟ್